ಶ್ರೀ ಭೀಮಣ್ಣ ಖಂಡ್ರೆ.—ಸ್ಥಳೀಯ ರೈತರು ಮತ್ತು ಭೂಸಾರ ಸಂರಕ್ಷಣಾಧಿಕಾರಿಯವರ ನಡುವೆ ವ್ಯಾಜ್ಯವಿರುವುದರಿಂದ ತನಿಖೆಯನ್ನು ಮೂರನೆಯವರ ಕಡೆಯಿಂದ ಮಾಡಿಸುವಿರಾ ?

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ಸದಸ್ಯರು ದೂರನ್ನೇ ಕೊಡದೆ ತನಿಖೆಯನ್ನು ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳಿದರೆ ಹೇಗೆ?

Drinking Water Supply Scheme at Brahmawar, Udipi Taluk

87. SRI ANANDA KUNDA HEGDE (Brahmawar).—Will the Minister for Rural Development and Panchayati Raj be pleased to state :—

the stage at which the drinking water supply scheme of Town Panchayat Brahmawar, Udupi taluk stands ?

SRI K. PRABHAKAR (Minister for Rural Development and Panchayati Raj).—Sanction has been accorded for the Brahmavar water supply scheme for Rs. 3.75 lakhs as per Government Order No. RDC 606 VRW 76 dated 24-1-1977.

One borewell has already been dug as per the said scheme and the water struck in the well was found to be saline and hence not fit for drinking. Hence the Public Health Engineering Department has planned to dig two open wells. Plans and estimates of this scheme which have been referred to the Executive Engineer, Hassan for his reconsideration are pending with him.

ಶ್ರೀ ಆನಂದ ಕುಂದ ಹೆಗ್ಡೆ.—ಉಡುಪಿ ತಾಲ್ಲೂಕಿನ ಬ್ರಹ್ಮಾವರ ಟೌನ್ ಪಂಚಾಯತದ ಕುಡಿಯುವ ನೀರಿನ ಯೋಜನೆ ಈಗ ಯಾವ ಹಂತದಲ್ಲಿದೆ ?

† ಶ್ರೀ ಕೆ. ಪ್ರಭಾಕರ್.—ಈಗಾಗಲೇ ತೆಗೆಸಲಾಗಿರುವ ಕೊಳವೆ ಬಾವಿಯಲ್ಲಿ ಉಪ್ಪು ನೀರು ಬಂದಿದ್ದ ಕಾರಣ, ಇನ್ನೂ ಎರಡು ಸೇದುವ ಬಾವಿಗಳನ್ನು ತೆಗೆಯಬೇಕೆಂದು ಪುನರ್ ವ್ಯವಸ್ಥೆ ಮಾಡ ಲಾಗಿದೆ. ಆ ಕೆಲಸವನ್ನು ಶೀಘ್ರವಾಗಿ ತೆಗೆದುಕೊಂಡು ಪೂರೈಸಲಾಗುವುದು.

ಶ್ರೀ ವೈ. ರಾಮಕೃಷ್ಣ.—ಬ್ರಹ್ಮಾವರ ಟೌನ್ ಪಂಚಾಯತದ ಕುಡಿಯುವ ನೀರಿನ ಅಂದಾಜನ್ನು ಪುನರ್‌ವಿಮರ್ಶಿಸಲು ಎಕ್ಸಿಕ್ಯೂಟಿವ್ ಇಂಜಿನಿಯರ್, ಹಾಸನ, ಅವರ ಕಛೇರಿಯಲ್ಲಿ ನಕ್ಷೆ ಮತ್ತು ಅಂದಾಜುಗಳು ಉಳಿದಿವೆ ಎಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇನ್ನೂ ಎಷ್ಟು ದಿವಸ ಆಲ್ಲಿ ಉಳಿಸ ಲಾಗುವುದೆಂದು ಮಾನ್ಯ ಸಚಿವರು ತಿಳಿಸುವರೆ ?

ಶ್ರೀ ಕೆ. ಪ್ರಭಾಕರ್,—ಈಗ ಉಳಿದಿಲ್ಲ ; ಎಲ್ಲ ಪೂರೈಸಲಾಗಿದೆ. ಶೀಘ್ರದಲ್ಲೇ ಕೆಲಸವನ್ನು ಕೈಗೊಂಡು ಮುಗಿಸಲಾಗುವುದು.

ಶ್ರೀ ಆನಂದ ಕುಂದ ಹೆಗ್ಡೆ.—ಕುಡಿಯುವ ನೀರಿನ ಯೋಜನೆ ತಡವಾಗಿ ಆದರೆ ಬ್ರಹ್ಮಾವರ ಟೌನ್ ಪಂಚಾಯಿತಿಗೆ ಆರ್ಥಿಕವಾಗಿ ಬಹಳ ನಷ್ಟವಾಗುತ್ತದೆಂಬುದು ಮಾನ್ಯ ಸಚಿವರಿಗೆ ತಿಳಿದಿರಬೇಕು. ಆದುದರಿಂದ, ಮಾನ್ಯ ಸಚಿವರು ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಕಾರ್ಯಗತ ಮಾಡಿಸುವರೆ?

ಶ್ರೀ ಕೆ. ಪ್ರಭಾಕರ್.—ಪ್ರಯತ್ನ ಮಾಡುತ್ತೇನೆ.